ಎದುರಿಸುವುದು ಇವನಿಗೆ ಕಷ್ಟವಾಯಿತೊ ಅಥವಾ ಒಂದು ವಾರದ ಮನದ ಭಾರ ಹೀಗೆ ಮಾಡಿಸಿತೋ? ಹಾಗೆಯೇ ನಿಂತುಕೊಂಡ. ರಿಸೆಪ್ಷನಿಸ್ಟ್ ಕೊಂಚ ಇವನನ್ನು ಕೆಕ್ಕರಿಸಿ ಬೇರೆಯ ಗಿರಾಕಿಗಳತ್ತ ಚಿತ್ತ ಹರಿಸಿದ. ಅವನು ತೆಗೆದುಕೊಂಡ ಆ ಹತ್ತು ನಿಮಿಷ ಜ್ವಾಲಾಗ್ನಿಯ ಬಾವಿಯೊಳಗೆ ಇದ್ದಂತೆ ಮನ ಚಡಪಡಿಸಿತು.

ಹತ್ತು ಗಳಿಗೆಗಳ ನಂತರ ಅವನು ಈ ಕಡೆ ತಿರುಗಿ ಏನು ಎನ್ನುವಂತೆ ಮತ್ತೆ ಪ್ರಶ್ನಿಸಿದ. 'ಗುಜರಾತ್‌ನಿಂದ ಭೂಮಿ ಫೌಂಡೇಶನ್‌ನ ಡೆಲಿಗೇಟ್ಸ್ ಬಂದಿದ್ದಾರಲ್ಲ ಅವರನ್ನು ಭೇಟಿ ಮಾಡಬೇಕಾಗಿತ್ತು' ಎಂದು ಬೆವರು ಒರೆಸಿಕೊಂಡ. 'ಅವರು ಬಂದಿದ್ದು ಒಬ್ಬರೆ. ಅವರ ಹೆಸರು ಬಬಿತಾ ಗಾಜಿಪುರ, ಅವರು 403ರಲ್ಲಿ ಇದ್ದಾರೆ. ಮೂರನೇ ಫ್ಲೋರ್. ನಿಲ್ಲಿ, ಅವರ ಅನುಮತಿ ಪಡೆಯುವೆ' ಎಂದು ಅವರ ಜೊತೆ ಫೋನ್‌ನಲ್ಲಿ ಮಾತಾಡಿ, 'ಆಯ್ತು, ಓಕೆ ಹೋಗಿ' ಎಂದು ಹೇಳಿ ತನ್ನ ರುದ್ರಕೋಪದ ಕಂಗಳನ್ನು ಇನ್ನೊಬ್ಬರ ಮೇಲೆ ಹಾಯಿಸಿ ವ್ಯವಹಾರಕ್ಕೆ ಇಳಿದ. ಲಿಫ್ಟ್‌ನಲ್ಲಿದ್ದ ಹುಡುಗ ಮೂರನೇ ಫ್ಲೋರ್ ಎಂದಾಕ್ಷಣ ಸೌಜನ್ಯದ ಮುದ್ದೆಯಾಗಿದ್ದ ಅವನು ಅತಿವಿನಯಕ್ಕಿಂತ ಹೆಚ್ಚಾಗಿ ವರ್ತಿಸಿದ. ಒಂದು ಅಘೋರ ಮುಖ, ಇನ್ನೊಂದು ಶಾಂತಿದೂತನ ಸದ್ಯೋಜಾತ ಮುಖ ಎಂಬಂತೆ ಒಮ್ಮೆಲೆ ಅನುಭವಕ್ಕೆ ಬಂದಿತು. ಮೂರನೇ ಫ್ಲೋರ್ ಬಂದ ತಕ್ಷಣವೇ ಪದೇ ಪದೇ ನಮಸ್ಕರಿಸಿದ. ನಮಸ್ಕಾರದ ಮರ್ಮ ಇವನಿಗೆ ಅರ್ಥವಾಯಿತು. ನರಕಸದೃಶ ಜಗತ್ತಿಗೆ, ಹೂವಿನಂತಹ ಲಿಫ್ಟ್‌ನಲ್ಲಿ ಕರೆದುಕೊಂಡು ಬಂದದ್ದಕ್ಕಾಗಿ ಎಷ್ಟು ಹಣ ಕೊಟ್ಟರೂ ಕಡಿಮೆ ಎನ್ನಿಸಿತು. ಆದರೆ, ವ್ಯವಹಾರದ ಮನಸು ತಡಕಾಡಿ ಹತ್ತು ರೂಪಾಯಿ ಭಿಕ್ಷೆಯನ್ನು ಇಲ್ಲಿಯವರೆಗೂ ಸೌಜನ್ಯ ಸ್ವೀಕರಿಸಿದ ಉಪಕಾರಕ್ಕಾಗಿ ಆ ಪಾರನ ಕೈಯಲ್ಲಿ ಇಡಲು ಶಕ್ತವಾಯಿತು.

ನಾಲ್ಕುನೂರಾ ಮೂರು ಎಂಬ ನರಕದ ಬಾಗಿಲಿಗೆ ಬಂದುನಿಂತ. ಬರಬಾರದ ಜಾಗಕ್ಕೆ ತಾನು ಏಕೆ ಬಂದೆ? ತನಗೂ ನಾಚಿಕೆ ಇಲ್ಲವೇ ಅನ್ನಿಸಿ, ಬರಬಾರದಿತ್ತು ನಾ... ಊರಿಗೆ ಬಿದ್ದು ಸಾಯಬೇಕು ಗೋಡೆಯ ಮಾರಿಗೆ ಎನ್ನುವ ಮಡಿವಾಳಪ್ಪನ ಸ್ವರವಚನ ನೆನಪಿಗೆ ಬಂತು. ತಾನು ಬಂದಿದ್ದು ಹಳೆಯ ನೆನಪುಗಳ ಲೆಕ್ಕ ಕೇಳಲು ಎಂದು ಮತ್ತೆ ದೃಢನಾಗಿ ಬಾಗಿಲು ಬಡಿದ. ಹೊರಗೆ ತಣ್ಣಗಿದ್ದರೂ ಕಲಬುರ್ಗಿಯ ಸೂರ್ಯ ಆಗಲೇ ಭುಸುಗುಟ್ಟುವ ಕಾಳಿಂಗ ಸರ್ಪದಂತೆ ಮೇಲೇಳುತ್ತಿದ್ದ. ಒಳಗಿನಿಂದ, 'ಜಸ್ಟ್ ಮಿನಿಟ್ ಬಂದೆ' ಎನ್ನುವ ಧ್ವನಿ. ಅದು ಹಿಂದೆ ಇಡೀ ವಿಶ್ವವಿದ್ಯಾಲಯದ ತುಂಬಾ ಅನುರಣಿಸಿತ್ತಲ್ಲ ಅದೇ ಧ್ವನಿ. ಆದರೆ, ಕೊಂಚ ಗಟ್ಟಿಯಾಗಿದೆ. ಆ ಕಡೆಯೂ ಹಳೆಯ ನೆನಪುಗಳ ಹಳವಂಡದಲ್ಲಿ ಸಿಕ್ಕು ಬಿದ್ದು ಕೊಂಚ ಆರ್ದ್ರತೆ ಆಪ್ತತೆಯ ಭೀಭತ್ಸಮಯದ ಸಮಾವಿಷ್ಠ ಉಂಡೆಯಾಗಿದೆ. ಕ್ಷಣ ಮಾತ್ರದಲ್ಲೇ ತೆಗೆದ ಬಾಗಿಲಿನ ಒಳಗೆ ನಿಂತವಳು ಇವನನ್ನು ಮತ್ತಾವುದೋ ಲೋಕಕ್ಕೆ ಒಯ್ದಳು. ಇದು ದ್ರೋಹದ ಪರ್ವತವೇ? ಮೋಸದ ಸಮುದ್ರವೇ ಎಂದು ಅವಳನ್ನೆ ದಿಟ್ಟಿಸಿದ. ಹೌದು, ತಾನು ಯೋಚಿಸುತ್ತಿರುವುದೆಲ್ಲ ಸತ್ಯ ದ್ರೋಹದ ಪರ್ವತದಲ್ಲಿ.. ಸಂಜೀವಿನಿಗೆಲ್ಲಿ ಜಾಗ? ಎಲ್ಲಿ ನೋಡಿದರಲ್ಲಿ ಧತ್ತೂರದ ಕಳೆ. ಒಮ್ಮಿಂದೊಮ್ಮೆಲೆ ತನ್ನ ಜೇಬಿನಲ್ಲಿದ್ದ ಹನ್ನೆರಡು ಪೇಜಿನ ಪತ್ರ ಕೊಡಲು ತಡಕಾಡಿದ. ಮತ್ತೆ– ಈಗ ಬೇಡ ಕೊನೆಯ ಗಳಿಗೆಯಲ್ಲಿ ಕೊಡೋಣ ಎಂದು ಸುಮ್ಮನಾದ. ಇವನು ಮೌನವಾಗೇ ಅವಳನ್ನು ನೋಡಿದ ದುಂಡಗೆ ಮುಖ ಹೊಳಪುಕಂಗಳು ಸ್ವಲ್ಪ ಮೊಂಡಮೂಗಿನ ಈ ಅದ್ವಿತೀಯ ಸುಂದರಿಯ ಸೌಂದರ್ಯ ಹಾಗೆಯೇ ಇತ್ತು. ಹಾಗೆಯೇ ಇತ್ತು ಅನ್ನುವುದಕ್ಕಿಂತ, ಇನ್ನೂ ಹೆಚ್ಚಾಗಿತ್ತು. ಆಗಿನ ಚೂಡಿದಾರ ಸಾರಿಗಳು ಹೋಗಿ ಒಂದು ಜೀನ್ಸ್. ಅದರ ಮೇಲೊಂದು ಖಾದಿ ಜುಬ್ಬಾ ಹಾಕಿಕೊಂಡಿದ್ದಳು.

ಒಮ್ಮಿಂದೊಮ್ಮೆಲೆ ಆಕೆ ಬಂದು ಗಟ್ಟಿಯಾಗಿ ತಬ್ಬಿಕೊಂಡಳು. ಹತ್ತು ವರ್ಷದ ಕೆಳಗೆ ದಿನಾಲು ಎಷ್ಟು ತಬ್ಬಿಕೊಂಡಿದ್ದಳೋ ಹಾಗೆಯೆ. ಇವನಿಗೆ ದುಃಖದ ಕಟ್ಟೆ ಒಡೆದು ಕಣ್ಣೀರು ಸರಸರನೆ ಜಾರಿ ಭೂಮಿಗೆ ಬಿದ್ದವು. ಮುತ್ತಿನ ಹಾರ ಹರಿದು ಭೂಮಿಗೆ ಬಿದ್ದಂತೆ, 'ಮೈ ಸ್ವೀಟ್ ದೇವು ಕೊನೆಗೂ ಸಿಕ್ಕೆಯಲ್ಲಾ... ನಾನು ಈ ಜನ್ಮದಲ್ಲಿ ನೋಡುವುದಿಲ್ಲ ಎಂದುಕೊಂಡಿದ್ದೆ'ಎಂದು ತಲೆಗೆ ಮುತ್ತು ಕೊಟ್ಟಳು. ಇವನು ಎರಡು ಕೈಗಳನ್ನು ಹಾಗೆಯೇ ಕೆಳಗೆ ಬಿಟ್ಟು ನಿಶ್ಚಲನಾಗಿ ನಿಂತಿದ್ದ. ಅವಳಿಗೆ ಗೊತ್ತಾಯಿತೋ ಏನೋ. ಅವಳು ಸಹ ಅಪ್ಪುಗೆಯನ್ನು ಬಿಡಿಸಿಕೊಂಡು, 'ಕೂಡು, ನೀನು ಸ್ವಲ್ಪ ದಪ್ಪವಾಗಿದ್ದೀಯಾ, ಅದು ಬಿಟ್ಟರೆ ನನ್ನ ಹಳೆಯ ದೇವದತ್ತಾನೆ' ಎಂದಳು. ತಾನು ಏನೂ ಮಾಡಿಯೇ ಇಲ್ಲ. ಯಾವ ಪಾಪಗಳೂ ಇಲ್ಲ ಎಂದು ಅವಳ